# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**KARNATAKA STATE ROAD TRANSPORT CORPORATION**

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ :: ಬೆಂಗಳೂರು :: Kempegowda Bus Station Division :: **Bangaluru**

ಸಂಖ್ಯೆ:ಕರಾಸಾ/ಕೆಂಬನಿ/ವಾ-1/ **1138 /2018-19** ದಿನಾಂಕ: **25/01/2019**

**ಟೆಂಡರ್ ಪ್ರಕಟಣೆ ಸಂಖ್ಯೆ:05/2018-19**

**(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣ, ಬೆಂಗಳೂರು ಇಲ್ಲಿ ತೆರವಾಗಿರುವ / ತೆರವಾಗಲಿರುವ ಕಟ್ಟಿದ/ತೆರೆದ ಸ್ಥಳದಲ್ಲಿರುವ ಮಳಿಗೆಗಳಿಗೆ ಹಾಗೂ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಮೂರು ವರ್ಷ / ಐದು ವರ್ಷ ಅವಧಿಗೆ "ಹೇಗಿದೆಯೋ ಹಾಗೆ" ಷರತ್ತಿನೊಂದಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಏರ್ಪಡಿಸಲಾಗಿದೆ. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರದ ಸ್ಟಾಂಪ್ ಕಾಯಿದೆ ಅನ್ವಯ ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು ಹಾಗೂ ಪರವಾನಗಿ ಶುಲ್ಕದ ಮೇಲೆ ಸರ್ಕಾರ ನಿಗದಿಪಡಿಸಿರುವ ಜಿ.ಎಸ್.ಟಿ. ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಮಾಸಿಕ ಪರವಾನಗಿ ಶುಲ್ಕದ ಮೇಲೆ ವಾರ್ಷಿಕ ಶೇಕಡ 10 ರಷ್ಟು ಹೆಚ್ಚುವರಿ ಶುಲ್ಕ ಪಾವತಿಸತಕ್ಕದ್ದು.

ಅರ್ಜಿದಾರರು ಸಂಬಂಧಿಸಿದ ಮಳಿಗೆಗಳ ಅರ್ಜಿ ಶುಲ್ಕ/ಇ.ಎಮ್.ಡಿ ಮೊತ್ತವನ್ನು **"Divisional Controller, KSRTC, Kempegowda Bus Station, Bengaluru-560009"** ರವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಮೂಲಕ ಪಡೆದು, ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟನಲ್ಲಿ ಅರ್ಜಿ ಸಲ್ಲಿಸಿದ ನಂತರ "ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ" ಅರ್ಜಿ ಶುಲ್ಕ ಮತ್ತು ಇ.ಎಂ.ಡಿ ಮೊತ್ತದ ಡಿಡಿಯನ್ನು ಕೆಂಪೇಗೌಡ ಬಸ್ ನಿಲ್ದಾಣ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆನ್‌ಲೈನ್ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಬಿಡ್ಡುದಾರರು ಕೆಳಕಂಡ ಪಟ್ಟಿಯಲ್ಲಿ ತೋರಿಸಿರುವಂತೆ ನಿಗಧಿತ ಇ.ಎಮ್.ಡಿ ಮೊತ್ತದಲ್ಲಿ ₹ 500/- ಗಳನ್ನು e-portal ಮುಖೇನ ಪಾವತಿಸುವುದು. ಉಳಿದ ಇ.ಎಮ್.ಡಿ ಮೊತ್ತವನ್ನು ಡಿ.ಡಿ.ರೂಪದಲ್ಲಿ ಪಡೆದು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು. ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡುವುದು.

## ಇ-ಟೆಂಡರು ವಿವರಗಳು

### ಕೆಂಪೇಗೌಡ ಬಸ್ ನಿಲ್ದಾಣ-ಟರ್ಮಿನಲ್-01 ಮತ್ತು 02ಎ

| ಕ್ರ ಸಂ | ವಾಣಿಜ್ಯ ಮಳಿಗೆ ಸಂಖ್ಯೆ ಮತ್ತು ಹೆಸರು | ವಿಸ್ತೀರ್ಣ ಚದರಡಿಗಳಲ್ಲಿ | ಅವಧಿ (ವರ್ಷಗಳಲ್ಲಿ) | ಮಾಸಿಕ ಮಿತವ್ಯಯ ಶುಲ್ಕ (₹) | ಇಎಂಡಿ(ರೂಗಳಲ್ಲಿ) | | ಅರ್ಜಿ ಶುಲ್ಕ ಜಿ.ಎಸ್.ಟಿ ಸೇರಿ ಡಿ.ಡಿ. ಮೂಲಕ ₹ |
|---|---|---|---|---|---|---|---|
| | | | | | ಇ-ಪ್ರೊಕ್ಯೂರ್ ಮೆಂಟ್ ಮೂಲಕ (₹) | ಡಿ.ಡಿ. ಮೂಲಕ(₹) | |
| 1 | ಮಳಿಗೆ ಸಂಖ್ಯೆ-47, ಟರ್ಮಿನಲ್-1, ಕಟ್ಟಿದ ಮಳಿಗೆ, ಸಾಮಾನ್ಯ ಮಳಿಗೆ, ಮಳಿಗೆಯು ಖಾಲಿ ಇದೆ. ಮೂರನೇ ಬಾರಿ ಟೆಂಡರು. | 103.82 | 5 | 16335/- | 500/- | 48,505/- | 192 |
| 2 | ಮಳಿಗೆ ಸಂಖ್ಯೆ-61, ಟರ್ಮಿನಲ್-1, ಕಟ್ಟಿದ ಮಳಿಗೆ, ಸಾಮಾನ್ಯ ಮಳಿಗೆ, ಮಳಿಗೆಯು ಖಾಲಿ ಇದೆ. ಮೊದಲನೇ ಬಾರಿ ಟೆಂಡರು. | 107 | 5 | 4730/- | 500/- | 13,690/- | 118 |
| 3 | ಮಳಿಗೆ ಸಂಖ್ಯೆ-01, ಕಟ್ಟಿದ ಮಳಿಗೆ, ಟರ್ಮಿನಲ್-2ಎ, ಸಾಮಾನ್ಯ ಮಳಿಗೆ, ಮಳಿಗೆಯು ಖಾಲಿ ಇದೆ. ಮೂರನೇ ಬಾರಿ ಟೆಂಡರ್ | 110.01 | 5 | 81,170/- | 500/- | 2,43,010/- | 962 |

### ಮೈಸೂರು ರಸ್ತೆ ಬಸ್ ನಿಲ್ದಾಣ

| ಕ್ರ ಸಂ | ವಾಣಿಜ್ಯ ಮಳಿಗೆ ಸಂಖ್ಯೆ ಮತ್ತು ಹೆಸರು | ವಿಸ್ತೀರ್ಣ ಚದರಡಿಗಳಲ್ಲಿ | ಅವಧಿ (ವರ್ಷಗಳಲ್ಲಿ) | ಮಾಸಿಕ ಮಿತವ್ಯಯ ಶುಲ್ಕ (₹) | ಇಎಂಡಿ (ರೂ.ಗಳಲ್ಲಿ) | | ಅರ್ಜಿ ಶುಲ್ಕ ಜಿ.ಎಸ್.ಟಿ ಸೇರಿ ಡಿ.ಡಿ. ಮೂಲಕ ₹ |
|---|---|---|---|---|---|---|---|
| | | | | | ಇ-ಪ್ರೊಕ್ಯೂರ್ ಮೆಂಟ್ ಮೂಲಕ (₹) | ಡಿ.ಡಿ. ಮೂಲಕ(₹) | |
| 4 | ಮಳಿಗೆ ಸಂಖ್ಯೆ-09, ಸಾಮಾನ್ಯ ಮಳಿಗೆ, ಕಟ್ಟಿದ ಮಳಿಗೆ, ಮಳಿಗೆ ಖಾಲಿ ಇದೆ. (ಮೂರನೇ ಬಾರಿ ಟೆಂಡರು) | 83.25 | 5 | 3,663 | 500/- | 10489/- | 118 |
| 5 | ಮಳಿಗೆ ಸಂಖ್ಯೆ-13 ಸಾಮಾನ್ಯ ಮಳಿಗೆ, ಕಟ್ಟಿದ ಮಳಿಗೆ, ಮಳಿಗೆಯು ಖಾಲಿ ಇದೆ. (ಎರಡನೇ ಬಾರಿ ಟೆಂಡರ್) | 80.84 | 5 | 3903/- | 500/- | 11,209/- | 118 |

**ಸೂಚನೆ**

ಮಳಿಗೆಗಳನ್ನು ಬಿಡ್ಡುದಾರರು ಬಿಡ್ಡು ಮೊತ್ತ ನಮೂದಿಸುವ ಮೊದಲು ಸ್ಥಳವನ್ನು ಖುದ್ದಾಗಿ ಪರಿಶೀಲಿಸುವುದು. ಸದರಿ ಮಳಿಗೆಯು "ಈಗ ಹೇಗಿದಿಯೋ ಹಾಗೆಯೇ" ಎಂಬ ಆಧಾರದ ಮೇಲೆ ಷರತ್ತಿಗೊಳಗಾಗಿರುತ್ತದೆ. ಮಳಿಗೆಯಲ್ಲಿ ಯಾವುದೇ ಕಾಮಗಾರಿ/ಮಾರ್ಪಡು ಕೈಗೊಳ್ಳಬೇಕಿದ್ದಲ್ಲಿ, ನಿಗಮದ ಪೂರ್ವಾನುಮತಿ ಪಡೆದು ನಿಗಮದ ಅಭಿಯಂತರರವರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಬೇಕಿರುತ್ತದೆ.

ಟೆಂಡರ್ ಪ್ರಕಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಮೀಸಲಾತಿ ಬಯಸುವ ಬಿಡ್ಡುದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್ ನಲ್ಲಿ ಅಪ್ ಲೋಡ್ ಮಾಡುವುದು. ಸರ್ಕಾರದಿಂದ ಕಾಲಕಾಲಕ್ಕೆ ವಿಧಿಸಲಾಗುವ ಸಂಬಂಧಪಟ್ಟ ತೆರಿಗೆಗಳು ಅನ್ವಯವಾಗುತ್ತವೆ. ಸಂಸ್ಥೆಯ ಕಪ್ಪು ಪಟ್ಟಿಯಲ್ಲಿರುವ ಪರವಾನಿಗೆದಾರರು ಇ-ಟೆಂಡರಿನಲ್ಲಿ ಭಾಗವಹಿಸುವಂತಿಲ್ಲ, ಒಂದು ವೇಳೆ ಭಾಗವಹಿಸಿದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು. ದಿನಾಂಕ: 20/02/2019 ರಂದು ಸಮಯ 17.00 ಗಂಟೆಯೊಳಗೆ ನಿಗದಿತ ಇ.ಎಂ.ಡಿ ಮೊತ್ತದ ಡಿಡಿಯನ್ನು ಇತರೆ ದಾಖಲಾತಿಗಳೊಂದಿಗೆ ಕೆಂಪೇಗೌಡ ಬಸ್ ನಿಲ್ದಾಣ, ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು.

ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಷರತ್ತು ನಿಬಂಧನೆಗಳು ಟೆಂಡರ್ ಪ್ರಕ್ರಿಯೆಯ ಭಾಗವಾಗಿದೆ. *ಹೆಚ್ಚಿನ ವಿವರಗಳಿಗಾಗಿ* http:// www.eproc.karnataka.gov.in ವೆಬ್ ಸೈಟ್‌ನ್ನು ವೀಕ್ಷಿಸಬಹುದಾಗಿದೆ ಹಾಗೂ *ವಿಭಾಗೀಯ ನಿಯಂತ್ರಣಾಧಿಕಾರಿ ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.* ಅರ್ಜಿಗಳನ್ನು ತಿರಸ್ಕರಿಸುವ, ಪುರಸ್ಕರಿಸುವ ಅಥವಾ ಮಾರ್ಪಾಡಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗೆ 7760990554/7760960049ಗೆ ಸಂಪರ್ಕಿಸುವುದು.

ಇ-ಟೆಂಡರಿನಲ್ಲಿ ಭಾಗವಹಿಸುವವರು ದಿನಾಂಕ 30/01/2019 ರಿಂದ 18/02/2019 ರ ಸಮಯ 16.00 ಗಂಟೆವರೆಗೆ http:// www.eproc.karnataka.gov.in ಅಂತರ್ಜಾಲದ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. online ಮೂಲಕ ಟೆಂಡರನ್ನು ದಿನಾಂಕ 21/02/2019 ರಂದು 11.00 ಗಂಟೆಗೆ ತೆರೆಯಲಾಗುವುದು, (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ)

-ಸಹಿ-
ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು.

ಪ್ರತಿಯನ್ನು, ಗೌರವಪೂರ್ವಕವಾಗಿ:

1. ಆಪ್ತ ಕಾರ್ಯದರ್ಶಿಗಳು, ನಿರ್ದೇಶಕರು (ಭ ಮತ್ತು ಜಾ) ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರ ಗಮನಕ್ಕೆ ತರಲು ಕೋರಲಾಗಿದೆ.
2. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿಗಮದ ಅಂತರ್‌ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕಳುಹಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು.

ಪ್ರತಿಯನ್ನು: ಟೆಂಡರು ಕಮಿಟಿಯ ಸದಸ್ಯರಾದ ಉ.ಮು.ಭ&ಜಾ, ವಿಸಂಅ(ಕೆಂಬನಿ/ಮೈ.ರ.ಬ.ನಿ), ಸಹಾಅ(ಕಾಮಗಾರಿ), ಸ.ಲೆ. ಕ.ರಾ.ರ.ಸಾ.ನಿಗಮ, ಕೆಂಬನಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸುತ್ತಾ, ದಿನಾಂಕ 21/02/2019 ರಂದು 11.00 ಗಂಟೆಗೆ ಇ ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರುವಂತೆ ಈ ಮೂಲಕ ತಿಳಿಸಲಾಗಿದೆ.